**ಸಾಕ್ಷಿಗೆ ದಿನಾಂಕ 16.09.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಬಿ.ಎ. ವಕೀಲರಿಂದಃ**

1. ನಾನು ಎಸ್ ಎಸ್ ಎಲ್ ಸಿ ಯವರೆಗೆ ಓದಿರುತ್ತೇನೆ. ನನ್ನ ಜನ್ಮದಿನಾಂಕವನ್ನು ತೋರಿಸಲು ಆಧಾರ್ ಕಾರ್ಡ್ ನ್ನು ಹಾಜರುಪಡಿಸಿರುತ್ತೇನೆ. ನಾನು 1970 ರ ನವೆಂಬರ್ ತಿಂಗಳಿನಲ್ಲಿ ಜನಸಿರುತ್ತೇನೆ. ನನಗೆ 60 ವರ್ಷ ವಯಸ್ಸಾಗಿದೆ ಎಂದರೆ ಸರಿಯಲ್ಲ. ನಾನು ಹೋಟೇಲ್ ಉದ್ಯಮ ನಡೆಸಲು ಪರವಾನಗಿ ಪಡೆದಿರುತ್ತೇನೆ. ಕುಮಾರ್ ಚಾಟ್ಸ್ ಅಂತ ಹೋಟೇಲ್ ಹೆಸರು. ನಾನು ಕುಮಾರ್ ಚಾಟ್ ಅಂತ ಹೆಸರಿನ ಹೋಟೇಲ್ ನಡೆಸುತ್ತಿದ್ದೆ ಎಂದು ನನ್ನ ಅರ್ಜಿಯಲ್ಲಿ ಅಥವಾ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಾನು ಕೆನರಾ ಬ್ಯಾಂಕ್ ಖಾತೆ ಹೊಂದಿರುತ್ತೇನೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಹೋಟೇಲ್ ಸಂಬಂಧಿಸಿದ ಸಾಮಾಗ್ರಿಗಳನ್ನು ಖರೀದಿಸಿರುವ ಬಗ್ಗೆ ಬಿಲ್ಲು ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಯಾವುದೇ ಹೋಟೇಲ್ ಉದ್ಯಮ ನಡೆಸದೇ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಹೋಟೇಲ್ ನಡೆಸಲು ಪರವಾನಗಿ ಇದ್ದರೆ ರಾತ್ರಿ 8-30 ರ ನಂತರ ವ್ಯವಹಾರ ಮಾಡುವಂತಿಲ್ಲ ಎಂದರೆ ಸರಿಯಲ್ಲ. ಫುಟ್ ಪಾತ್ ಪಕ್ಕದಲ್ಲಿ ಚಿಕ್ಕ ಅಂಗಡಿ ಇರುತ್ತದೆ. ಸದರಿ ಅಂಗಡಿಯನ್ನು ಬಾಡಿಗೆಯ ಮೇಲೆ ಪಡೆದಿರುತ್ತೇನೆ. ಅದರ ಬಾಡಿಗೆ ಕರಾರು ಪತ್ರ ಹಾಜರುಪಡಿಸಲು ಸಾಧ್ಯವಿಲ್ಲ, ಕಾರಣ ಬಾಡಿಗೆ ಕರಾರು ಪತ್ರ ಮಾಡಿಕೊಂಡಿರುವುದಿಲ್ಲ.

2. ಅಪಘಾತದ ದಿನ ನಾನು ರಾತ್ರಿ ತಳ್ಳುವ ಗಾಡಿಯನ್ನು ತಳ್ಳಿಕೊಂಡು ರಾತ್ರಿ 10.35 ರ ಸಮಯದಲ್ಲಿ ಪಾತ್ರೆ, ಸಿಲೆಂಡರ್, ಗ್ಯಾಸ್ ಸ್ಟವ್ ಇವುಗಳನ್ನು ತೆಗೆದುಕೊಂಡು ಹೋಗುತ್ತಿರುವಾಗ ಅಪಘಾತವಾಗಿರುತ್ತದೆ. ತಳ್ಳುವ ಗಾಡಿಯನ್ನು ನಾನು ಒಬ್ಬನೇ ತಳ್ಳಿಕೊಂಡು ಹೋಗುತ್ತಿದ್ದೆ. ನನ್ನ ಮುಖ್ಯ

ವಿಚಾರಣಾ ಪ್ರಮಾಣಪತ್ರದಲ್ಲಿ ತಳ್ಳುವ ಗಾಡಿಯಲ್ಲಿ ಪಾತ್ರೆ, ಸಿಲೆಂಡರ್, ಗ್ಯಾಸ್ ಸ್ಟವ್ ಇವುಗಳನ್ನು ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

3. ಅಪಘಾತವಾದ ದಿನವೇ ದೂರನ್ನು ನೀಡಿರುತ್ತೇನೆ. ಪೊಲೀಸರು ಅಪಘಾತದ ರಾತ್ರಿ ಅಪಘಾತದ ಸ್ಥಳಕ್ಕೆ ಬಂದಿರುತ್ತಾರೆ. ಪೊಲೀಸರು ತಳ್ಳುವ ಗಾಡಿಯಲ್ಲಿದ್ದ ಪಾತ್ರೆ, ಸಿಲೆಂಡರ್, ಗ್ಯಾಸ್ ಸ್ಟವ್ ಜಖಂಗೊಂಡಿವೆ ಎಂದು ಸ್ವತ್ತಿನ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ರಾತ್ರಿ ಪೊಲೀಸರು ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ಸೂರಿ ಎನ್ನುವವರು ನೋಡಿರುತ್ತಾರೆ. ಅಪಘಾತದ ರಸ್ತೆ ತುಮಕೂರು ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆ. ಸದರಿ ರಸ್ತೆಯಲ್ಲಿ ಪಾದಚಾರಿಗಳಿಗೆ ಪ್ರತ್ಯೇಕ ರಸ್ತೆ ಇದೆ ಎಂದರೆ ಸರಿ. ಅಪಘಾತದ ದಿನ ನಾನು ರಸ್ತೆಯ ಮೇಲೆ ಅಡ್ಡ-ದಿಡ್ಡಿಯಾಗಿ ನಡೆದುಕೊಂಡು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಾನು ಒಂದನೇ ಎದುರುದಾರರ ಜೊತೆ ಶಾಮೀಲಾಗಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಕಾರಣದಿಂದ ನಾನು ಮಾರನೇ ದಿನ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

4. ಅಪಘಾತದ ನಂತರ ನಾನು ಏಷಿಯನ್ ಕೇರ್ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಆಸ್ಪತ್ರೆಯಲ್ಲಿ ಅಪಘಾತದ ಹಿನ್ನೆಲೆಯನ್ನು ಹೇಳಿರುತ್ತೇನೆ, ಆದರೆ ಅಪಘಾತಪಡಿಸಿದ ವಾಹನ ಸಂಖ್ಯೆ ಹೇಳಿರುವುದಿಲ್ಲ. ಸದರಿ ಆಸ್ಪತ್ರೆಯಲ್ಲಿ 2 ದಿನಗಳ ಕಾಲ ಒಳರೋಗಿಯಾಗಿದ್ದೇನು. ನಂತರ ನಾನು ಸಿದ್ದಾರ್ಥ್ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ನನಗೆ ಶಸ್ತ್ರಚಿಕಿತ್ಸೆ ಆಗಿರುವುದಿಲ್ಲ. ನನಗೆ ಸಾಮಾನ್ಯ ಸ್ವರೂಪದ ಗಾಯಗಳು ಆಗಿತ್ತು ಎಂದರೆ ಸರಿಯಲ್ಲ. ನನಗೆ ಯಾವುದೇ ತರಹದ ಕೆಲಸ ಮಾಡಲಿಕ್ಕೆ ತೊಂದರೆಗಳು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಖರ್ಚು ವೆಚ್ಚ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಈಗ ಕೆಲಸ ಮಾಡುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ

ರೀತಿಯ ವಿಶ್ರಾಂತಿ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರುಹಾಜರು. ಈ ಕಾರಣದಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**